ವಿಶ್ವಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ನೀಡಿರುವ ಜಾಹೀರಾತು.

322 (224) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ):– ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

(ಅ) ಇತ್ತೀಚಿಗೆ ಬೆಂಗಳೂರಿನಲ್ಲಿ ಮುಕ್ತಾಯಗೊಂಡ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗ್ಗೆ ಪ್ರಚಾರ ಮಾಡಲು ವಿವಿಧ ಸುದ್ದಿ ಮಾಧ್ಯಮ ಹಾಗೂ ವಿದ್ಯುನ್ಮಾನ ಮಾಧ್ಯಮಗಳಿಗೆ (Print & electronic media) ಸರ್ಕಾರವು ಜಾಹೀರಾತನ್ನು ವಾರ್ತಾ ಇಲಾಖೆ ಮೂಲಕ ನೀಡಿತ್ತೆ :

(ಆ) ಹಾಗಿದ್ದಲ್ಲಿ, ಇದಕ್ಕಾಗಿ ವಿವಿಧ ಸುದ್ದಿ ಮಾಧ್ಯಮ ಹಾಗೂ ವಿದ್ಯುನ್ಮಾನ ಮಾಧ್ಯಮಗಳಿಗೆ ಸರ್ಕಾರವು ಎಷ್ಟು ಹಣವನ್ನು ಪಾವತಿ ಮಾಡಿದೆ? (ಪ್ರತಿ ಮಾಧ್ಯಮಗಳ ಹೆಸರು ಮತ್ತು ಇವುಗಳಿಗೆ ಪಾವತಿ ಮಾಡಿರುವ ಹಣದ ವಿವರಗಳನ್ನು ಒದಗಿಸುವುದು)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):–

(ಅ) ಇತ್ತೀಚೆಗೆ ಬೆಂಗಳೂರಿನಲ್ಲಿ ಮುಕ್ತಾಯಗೊಂಡ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದ ಕುರಿತು ಪ್ರಚಾರ ಕಾರ್ಯ ಕೈಗೊಳ್ಳಲು ಮಾನ್ಯ ವಾರ್ತಾ, ವಸತಿ, ಐ.ಟಿ.ಬಿ.ಟಿ, ಮತ್ತು ಬೆಂಗಳೂರು ಜಲಮಂಡಳಿ ಸಚಿವರ ಅಧ್ಯಕ್ಷತೆಯಲ್ಲಿ ಮಾಧ್ಯಮ ಪ್ರಚಾರ ಕಾರ್ಯಪಡೆಯನ್ನು ರಚಿಸಲಾಗಿತ್ತು. ಸದರಿ ಕಾರ್ಯಪಡೆಯು ವಾರ್ತಾ ಇಲಾಖೆಯೂ ಸೇರಿದಂತೆ ಸರ್ಕಾರದ 13 ವಿವಿಧ ಇಲಾಖೆ/ ನಿಗಮ / ಪ್ರಾಧಿಕಾರ/ ಮಂಡಳಿಗಳಿಗೆ ವಿಶ್ವ ಬಂಡವಾಳ ಹೂಡಿಕೆದಾರರ ಮಾಹಿತಿಗಾಗಿ ತಮ್ಮ ತಮ್ಮ ಯೋಜನೆ–ಸಾಧನೆಗಳನ್ನು ಬಿಂಬಿಸುವ ಜಾಹೀರಾತುಗಳನ್ನು ಪ್ರಕಟಿಸಲು ಮಾಧ್ಯಮ ಕ್ರಿಯಾ ಯೋಜನೆಯನ್ನು ರೂಪಿಸಿ ನೀಡಿತ್ತು.

ಆ ಮೇರೆಗೆ ವಾರ್ತಾ ಇಲಾಖೆಯೂ ಸಹ ತಮಗೆ ವಹಿಸಿದ್ದ ಮಾಧ್ಯಮ ಯೋಜನೆಯನ್ವಯ ಸುದ್ದಿ ಮಾಧ್ಯಮ ಹಾಗೂ ವಿದ್ಯುನ್ಮಾನ ಮಾಧ್ಯಮಗಳಿಗೆ ಜಾಹೀರಾತು ಬಿಡುಗಡೆ ಮಾಡಿದೆ.

(ಆ) ಇದಕ್ಕಾಗಿ ರೂ. 3,19,01,328.00 ಮೊತ್ತವನ್ನು ವೆಚ್ಚ ಮಾಡಲಾಗಿದೆ. (ಪ್ರತಿ ಮಾಧ್ಯಮದ ಹೆಸರು ಮತ್ತು ಅದಕ್ಕೆ ಪಾವತಿ ಮಾಡಲಾದ ಮೊತ್ತದ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ).

ಅನುಬಂಧ

ವಿಶ್ವ ಬಂಡವಾಳ ಹೂಡಿಕೆದಾರರ ಮೇಳ ಕುರಿತು ಮುದ್ರಣ ಮಾಧ್ಯಮ ಜಾಹೀರಾತು ವೆಚ್ಚದ ವಿವರಗಳು

ಕ್ರಮ ಸಂಖ್ಯೆ	ಪತ್ರಿಕಾ ಮಾಧ್ಯಮ	ಅಂಗೀಕೃತ ಜಾಹೀರಾತು ದರ ಪ್ರಕಾ.ಸೆ.ಮಿ/ ಪ್ರ.ಚ.ಸೆಂ ರೂಗಳಲ್ಲಿ	ಪೂರ್ಣ ಪುಟ ಜಾಹೀರಾತಿಗೆ ತಗಲಿದ ವೆಚ್ಚ	ಷರಾ
1.	ಡೆಕ್ಕನ್ ಹೆರಾಲ್ಡ್	681.25	2,83,400/-	
2.	ವಿಜಯ ಕರ್ನಾಟಕ	310	5,11,500/-	
3.	ಕನ್ನಡ ಪ್ರಭ	425	1,70,000/-	
4.	ಟೈಮ್ಸ್ ಆಫ್ ಇಂಡಿಯಾ	4775	21,00,000/-	
5.	ಇಂಡಿಯನ್ ಎಕ್ಸ್‌ಪ್ರೆಸ್	2618.75	10,37,500/-	
6.	ಪ್ರಜಾವಾಣಿ	1012.50	4,21,200/-	
7.	ಉದಯವಾಣಿ	587.50	2,35,000/–	
8.	ಸಂಯುಕ್ತ ಕರ್ನಾಟಕ	450	1,87,200/–	
9.	ದಿ ಹಿಂದೂ	2655	10,60,000/–	
10.	ಹಿಂದೂಸ್ಥಾನ್ ಟೈಮ್ಸ್(ಡಿಲ್ಲಿ)	2561.25	10,25,000/–	
11.	ಡಿ.ಎನ್.ಎ	1187.50	5,00,000/–	
12.	ದಿ ಟೆಲಿಗ್ರಾಫ್, ಕೋಲ್ಕತ್ತ	2000	8,00,000/–	
13.	ಡೆಕ್ಕನ್ ಕ್ರೊನಿಕಲ್	2355	9,37,500/–	
14.	ಸ್ಟೇಟ್ಸ್‌ಮೆನ್	1150	4,78,400/–	
15.	ಇಕನಾಮಿಕ್ ಟೈಮ್ಸ್	1480	6,15,680/–	
16.	ಹಿಂದೂ ಬಿಸಿನೆಸ್ ಲೈನ್	1480	6,15,680/–	
17.	ಫೈನಾಷಿಯಲ್ ಎಕ್ಸ್‌ಪ್ರೆಸ್	662.50	2,75,680/–	
18.	ಬಿಸಿನೆಸ್ ಸ್ಟಾಂಡರ್ಟ್	536.25	2,23,000/–	
19.	ರಾಜಸ್ಥಾನ್ ಪತ್ರಿಕಾ	1500	6,24,000/–	
20.	ದೈನಿಕ ಭಾಸ್ಕರ, ಲಕ್ನೋ	599.32	10,08,655/–	
21.	ಅಮರ ಉಜಾಲ,, ಯು.ಪಿ.	551,62	9,28,376/–	
22.	ದೈನಿಕ ಜಾಗರಣ, ಯು.ಪಿ.	749.53	5,99,624/–	
23.	ಸಾಕ್ಷಿ, ತೆಲುಗು ದಿನಪತ್ರಿಕೆ,(ಆಂದ್ರಪ್ರದೇಶ)	527.50	4,22,000/–	

24.	ಆಂಧ್ರ ಜ್ಯೋತಿ,	350	70,000/–
25.	ಬಾಂಬೆ ಸಮಾಚಾರ	1250	5,20,000/–
26.	ಆನಂದ ಬಜಾರ್ ಪತ್ರಿಕಾ	2500	10,40,000/–
27.	ಲೋಕಾಮತ್	329.25	2,80,000/–
28.	ಸಕಳಾ	625/–	1,25,000/–
29.	ಇಂಡಿಯಾ ಟುಡೇ–ಆಂಗ್ಲ ಪತ್ರಿಕೆ	4,00,000/– ಪ್ರತಿ ಪುಟಕ್ಕೆ	4,00,000/–
30.	ಔಟ್ ಲುಕ್–ಆಂಗ್ಲ ವಾರ ಪತ್ರಿಕೆ	2,00,000/– ಪ್ರತಿ ಪುಟಕ್ಕೆ	2,00,000/–
31.	ದಿ ವೀಕ್–ಆಂಗ್ಲ ವಾರಪತ್ರಿಕೆ	1,40,000/– ಪ್ರತಿ ಪುಟಕ್ಕೆ	1,40,000/–
32.	ಫ್ರೆಂಟ್ ಲೈನ್–ಆಂಗ್ಲವಾರ	42,000/–	42,000/–
33.	ಬಿಸಿನೆಸ್ ಇಂಡಿಯಾ– ಆಂಗ್ಲ ವಾರ ಪತ್ರಿಕೆ	1,50,000/– ಪ್ರತಿ ಪುಟಕ್ಕೆ	1,50,000/–
34.	ಪ್ಲೈ ಲೈಟ್ ಇಂಡಿಯಾ	75,000/– ಪ್ರತಿ ಪುಟಕ್ಕೆ	75,000/–
35.	ಫ್ರೀ ಪ್ರೆಸ್ ಜರ್ನಲ್	125 ಪ್ರತಿ ಪುಟಕ್ಕೆ	25,000/–
36.	ಸಂಜೆ ಕರ್ನಾಟಕ	42..50	17,432/– ಪ್ರತಿ ಪುಟಕ್ಕೆ
37.	ನಮಸ್ಕಾರ	3,50,000/– ಪ್ರತಿ ಪುಟಕ್ಕೆ	3,50,000/–
38.	ಸ್ವಾಗತ್	3,60,000/– ಪ್ರತಿ ಪುಟಕ್ಕೆ	3,60,000/–
39.	ದಿನ ತಂತಿ	2315	4,63,000/–
40.	ದಿನಕರನ್	226.92	1,82,000/–
41.	ಮಾಧ್ಯಮ ಪಟ್ಟಿಯಲ್ಲಿರುವ ರಾಜ್ಯದ ಜಿಲ್ಲಾ ದಿನಪತ್ರಿಕೆಗಳು. (300 ದಿನ ಪತ್ರಿಕೆ)	ಪುಟ ಒಂದಕ್ಕೆ	70,00,000/–
		ಒಟ್ಟು ರೂ.	2,63,16,828/–

ವಿಶ್ವ ಬಂಡವಾಳ ಹೂಡಿಕೆದಾರರ ಮೇಳ ಕುರಿತು ವಿದ್ಯುನ್ಮಾನ ಮಾಧ್ಯಮ ಜಾಹೀರಾತು ವೆಚ್ಚದ ವಿವರಗಳು

ಕ್ರಮ ಸಂಖ್ಯೆ	ವಾಹಿನಿ ಹೆಸರು	ಪ್ರತಿ ಹತ್ತು ಸೆಕೆಂಡ್ ಜಾಹೀರಾತು ದರ ಪ್ರಕಾ.ಸೆ.ಮಿ/ಪ್ರ.ಚ.ಸೆಂ ರೂಗಳಲ್ಲಿ	ಜಾಹೀರಾತು ಅವಧಿ	5 ದಿನಗಳ ಪ್ರಸಾರ ವೆಚ್ಚ ರೂ.ಗಳಲ್ಲಿ
1.	ಸಿ.ಎನ್.ಬಿ.ಸಿ.	30,000/–	30 ಸೆಕೆಂಡ್ಸ್	4,50,000/–
2.	ಝೀ – ಟಿ.ವಿ	1,000/-	30 ಸೆಕೆಂಡ್ಸ್	15,000/-
3.	ಸ್ಟಾರ್ ಪ್ಲಸ್	20,000/-	30 ಸೆಕೆಂಡ್ಸ್	3,00,000/–
4.	ನ್ಯೂಸ್ ಎಕ್ಸ್	4,000/-	30 ಸೆಕೆಂಡ್ಸ್	60,000/–
5.	ದೂರದರ್ಶನ	75,000/-	30 ಸೆಕೆಂಡ್ಸ್	11,25,000/–
6.	ಕಲರ್ಸ್	1,70,000/-	30 ಸೆಕೆಂಡ್ಸ್	25,50,000/–
7.	ಟೈಮ್ಸ್ ನೌ	6,000/–	30 ಸೆಕೆಂಡ್ಸ್	90,000/–
8.	ಬಿಬಿಸಿ	40,000/–	30 ಸೆಕೆಂಡ್ಸ್	6,00,000/–
9.	ಆಕಾಶವಾಣಿ	20,000/–	30 ಸೆಕೆಂಡ್ಸ್	4,00,000/–
10.	ಆಜ್‌ತಕ್	6.3000/–	30 ಸೆಕೆಂಡ್ಸ್	94,500/–
			ಒಟ್ಟು ರೂ	**55,84,500/–**

ಮುದ್ರಣ ಮಾಧ್ಯಮ ಜಾಹೀರಾತು ವೆಚ್ಚ	: ರೂ.	**2,63,16,828.00**
+ ವಿದ್ಯುನ್ಮಾನ ಮಾಧ್ಯಮ ಜಾಹೀರಾತು ವೆಚ್ಚ	: ರೂ.	**55,84,500.00**
ಒಟ್ಟು	: ರೂ.	**3,19,01,328.00**

ಹೊರರಾಜ್ಯದ ದೇವಾಲಯಗಳಿಗೆ ಇಲಾಖೆಯಿಂದ ನೀಡಿರುವ ಹಣ.

325 (296) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ):– ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಕಳೆದ ಒಂದು ವರ್ಷದಿಂದ ಇಂದಿನವರೆಗೆ ಹೊರ ರಾಜ್ಯದ ಯಾವ ಯಾವ ದೇವಾಲಯಗಳ ಅಭಿವೃದ್ಧಿಗಾಗಿ ಎಷ್ಟೆಷ್ಟು ಮೊತ್ತದ ಹಣವನ್ನು ಸರ್ಕಾರವು ನೀಡಿದೆ (ರಾಜ್ಯಗಳ ಹೆಸರು ಮತ್ತು ದೇವಾಲಯಗಳ ಹೆಸರು ಮತ್ತು ಇದಕ್ಕೆ ನೀಡಿರುವ ಹಣದ ವಿವರಗಳನ್ನು ಒದಗಿಸುವುದು) ?